# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು.

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದ)

ಫೋನ್‌ನಂ:0821– 2417106
ಫ್ಯಾಕ್ಸ್ ನಂ:0821 –2417105
e-mail:Cfo@cescmysore.org
CIN:U40109KA2004SGCO35177

ನಿಗಮ ಕಾರ್ಯಾಲಯ,
ನಂ.29, ವಿಜಯ ನಗರ 2ನೇ ಹಂತ,
ಹಿನಕಲ್, ಮೈಸೂರು.570017


ಕ್ರಮಾಂಕ:ಮುಆಅ/ಪ್ರವ್ಯ/ಉಪ್ರವ್ಯ(ತೆರಿಗೆ)/ಸಪ್ರವ್ಯ(ತೆ)/ಹಿಸ(ತೆ)/17–18/ cys-1180 ದಿನಾಂಕ:
ಲಗತ್ತು:4ಪ್ರತಿ

2 6 DEC 2017

## ಸುತ್ತೋಲೆ

ವಿಷಯ: ಜಿ.ಎಸ್.ಟಿ ನಿಯಮಗಳ ಅನುಷ್ಠಾನದ ಬಗ್ಗೆ.

ಉಲ್ಲೇಖ:1)ಮುಆಅ/ಪ್ರವ್ಯ/ಉಪ್ರವ್ಯ(ಎ&ಆರ್)/ಸಪ್ರವ್ಯ(ತೆರಿಗೆ)/17–18/ಸಿವೈಎಸ್–540/ದಿನಾಂಕ:31.07.17.
2)ಮುಆಅ/ಪ್ರವ್ಯ/ಉಪ್ರವ್ಯ(ಎ&ಆರ್)/ಸಪ್ರವ್ಯ(ತೆರಿಗೆ)/17–18/ಸಿವೈಎಸ್–455/ದಿನಾಂಕ:21.07.17.
3)ಮುಆಅ/ಪ್ರವ್ಯ/ಉಪ್ರವ್ಯ(ಎ&ಆರ್)/ಸಪ್ರವ್ಯ(ತೆರಿಗೆ)/17–18/ಸಿವೈಎಸ್–431/ದಿನಾಂಕ:14.07.17.
4)ಮುಆಅ/ಪ್ರವ್ಯ/ಉಪ್ರವ್ಯ(ಎ&ಆರ್)/ಸಪ್ರವ್ಯ(ತೆರಿಗೆ)/17–18/ಸಿವೈಎಸ್–404/ದಿನಾಂಕ:07.07.17.
5)ಮುಆಅ/ಪ್ರವ್ಯ/ಉಪ್ರವ್ಯ(ಎ&ಆರ್)/ಸಪ್ರವ್ಯ(ತೆರಿಗೆ)/17–18/ಸಿವೈಎಸ್–940/ದಿನಾಂಕ:04.11.17

************

### ಪ್ರಸ್ತಾವನೆ ಹಾಗೂ ಹಿನ್ನೆಲೆ:–

ದಿನಾಂಕ: 01.07.2017 ರಿಂದ ಜಿಎಸ್‌ಟಿಯ ಅನುಷ್ಠಾನಗೊಳಿಸಿರುವ ಹಿನ್ನಲೆಯಲ್ಲಿ, ಜಿ.ಎಸ್.ಟಿ ಕಾಯ್ದೆಯಲ್ಲಿ "ಮಾರಾಟ" ಮತ್ತು "ಖರೀದಿ" ಎಂಬ ಶಬ್ದಗಳ ಬದಲಾಗಿ "ಪೂರೈಕೆ" (supply) ಎಂಬ ಪದವು ಉಪಯೋಗಿಸಿದ್ದು, ನಿಗಮವು " ಸರಕು ಮತ್ತು ಸೇವಗಳ ಖರೀದಿ ಅಥವಾ ಪಡೆದಿದಲ್ಲಿ" ಅದನ್ನು "ಒಳ ಮುಖ ಪೂರೈಕೆ" (Inward Supply)ಎಂದು ಕರೆಯಲ್ಪಡುತ್ತದೆ.

ಉದಾ:ಸಾಮಾಗ್ರಿಗಳಾದರೆ ಕಂಬಗಳ ಖರೀದಿ, ಪರಿವರ್ತಕ ಖರೀದಿ ಇತ್ಯಾದಿಗಳು. ಸೇವೆಗಳಾದ ಬಾಡಿಗೆ ವಾಹನಗಳ ಸೇವೆ ಪಡೆಯುವುದು, ವಕೀಲರ ಸೇವೆ ಪಡೆಯುವುದು ಇತ್ಯಾದಿಗಳು.

ಅದೇ ರೀತಿ ನಿಗಮವು ಸರಕು ಮತ್ತು ಸೇವೆಗಳನ್ನು ಗ್ರಾಹಕರಿಗೆ ಮಾರಾಟ ಮಾಡಿ/ ನೀಡಿದಲ್ಲಿ " ಹೊರಮುಖ ಪೂರೈಕೆ" (Outward supply) ಎಂದು ಕರೆಯಲ್ಪಡುತ್ತದೆ.

ಉದಾ:ಸಾಮಾಗ್ರಿಗಳಾದರೆ ರದ್ದಿ ಕಂಬಗಳು, ರದ್ದಿ ಪರಿವರ್ತಕಗಳು ಇತ್ಯಾದಿಗಳು. ಸೇವೆಗಳಾದರೆ ಮೇಲ್ವಿಚಾರಣಾ ಸೇವೆ, ಹೆಸರು ವರ್ಗಾವಣೆ ಸೇವೆ ಇತ್ಯಾದಿಗಳು.

ಉಲ್ಲೇಖ (1) ರಿಂದ (4) ರವರೆಗಿನ ಸುತ್ತೋಲೆ/ ಪತ್ರಗಳಲ್ಲಿ ಜಿ.ಎಸ್.ಟಿ ತೆರಿಗೆಯನ್ನು ವಿದಿಸಿ, ಅದನ್ನು ಸಂಗ್ರಹಿಸಿ ಹಾಗೂ ಲೆಕ್ಕೀಕರಿಸುವ ಬಗ್ಗೆ ನಿರ್ದೇಶನ ನೀಡಲಾಗಿರುತ್ತದೆ. ಇದಕ್ಕೆ ಪೂರಕವಾಗಿ ಲೆಕ್ಕ ಘಟಕಗಳಲ್ಲಿ, ಹುಂಡಿಗಳನ್ನು ಪಾಸು ಮಾಡುವ ಸಂದರ್ಭಗಳಲ್ಲಿ ಹಾಗೂ ತಾಂತ್ರಿಕ ಶಾಖೆಗಳಲ್ಲಿ ಸರಕು ಮತ್ತು ಸೇವಾ ತೆರಿಗೆಗೆ ಸಂಬಂಧಿಸಿದಂತೆ, ಅನೇಕ ನ್ಯೂನತೆಗಳು ಕಂಡುಬಂದಿದ್ದು, ಅವುಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಈ ಕೆಳಕಂಡ ಅಂಶಗಳನ್ನು ಗಮನದಲಿಟ್ಟು ಅನುಸರಿಸತಕ್ಕದ್ದು.

ಪು.ತಿ.ನೋ.

## ಲೆಕ್ಕ ಘಟಕಗಳಲ್ಲಿ ಅನುಸರಿಸಬೇಕಾದ ನಿಯಮಗಳು:-

1) ಜಿ.ಎಸ್.ಟಿಯ ನೋಂದಣಿಯನ್ನು ಪ್ಯಾನ್ ಸಂಖ್ಯೆಯ ಆಧಾರದಮೇಲೆ ಮಾಡಲಾಗಿರುತ್ತದೆ. ಇದು **"15"** ಸಂಖ್ಯೆಯನ್ನು ಒಳಗೊಂಡಿರುತ್ತದೆ. ಉದಾ:**"29AACCC6636P1Z1"** ಇದರಲ್ಲಿ ಮೊದಲ ಎರಡು ಸಂಖ್ಯೆ **"29"** ರಾಜ್ಯದ ಸಂಕೇತವಾಗಿದೆ. (ಕರ್ನಾಟಕ) , 3ನೇ ಅಂಕಿಯಿಂದ ಸಂಬಂಧಿಸಿದ ನೋಂದಣಿದಾರರ ಪ್ಯಾನ್ ಸಂಖ್ಯೆಯು ಪ್ರಾರಂಭವಾಗಿ 10ನೇ ಅಂಕಿಗೆ ಮುಕ್ತಾಯಗೊಳ್ಳುತ್ತದೆ. **"AACCC6636P"** ನಂತರ ಮೂರು ಅಂಕಿಗಳು ಜಿ.ಎಸ್.ಟಿ ನೋಂದಣಿಯಾಗಿರುತ್ತದೆ ಮತ್ತು ಅವುಗಳು ಸರಿಯಿರುವ ಬಗ್ಗೆ ಕಡ್ಡಾಯವಾಗಿ **www.gst.gov.in/ search** ನಲ್ಲಿ ಪರೀಕ್ಷಿಸಿಕೊಳ್ಳುವುದು. ಉಳಿದ ರಾಜ್ಯಗಳ ಸಂಕೇತಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.

2) ಜಿ.ಎಸ್.ಟಿ ನೋಂದಣಿ ನಿಯಮಗಳ ಪ್ಯಾರ (11)ರನ್ವಯ ನಿಗಮದ ಜಿ.ಎಸ್.ಟಿ ನೋಂದಣಿ ಪ್ರಮಾಣ ಪತ್ರವನ್ನು ಕಛೇರಿಯ ಪ್ರಮುಖ ಸ್ಥಳದಲ್ಲಿ ಪ್ರದರ್ಶನ ಮಾಡತಕ್ಕದ್ದು.

3) ಹುಂಡಿಗಳನ್ನು ಪಾಸು ಮಾಡುವ ಸಂದರ್ಭದಲ್ಲಿ ರೆಕರಿಂಗ್ ರಿಜಿಸ್ಟರ್‌ನಲ್ಲಿ ಸರಕು/ಸೇವೆ ಪೂರೈಕೆದಾರರ ಜಿ.ಎಸ್.ಟಿ ನೋಂದಣಿ ಸಂಖ್ಯೆಗಳನ್ನು ಪ್ರತ್ಯೇಕ ಕಾಲಂನಲ್ಲಿ, ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಲ್ಲಿ, ಹುಂಡಿಯ ವಿವರಗಳನ್ನು ನಮೂದಿಸುವಾಗ ಕಡ್ಡಾಯವಾಗಿ ದಾಖಲಿಸತಕ್ಕದ್ದು. ಹಾಗೂ ಸದರಿ ದಾಖಲಾತಿಗಳನ್ನು ಜಿ.ಎಸ್.ಟಿ ಕಾಯ್ದೆಯನ್ವಯ ಕನಿಷ್ಟ 6ವರ್ಷಗಳವರೆಗೆ ನಿರ್ವಹಿಸತಕ್ಕದ್ದು.

4) ನಿಗಮದೊಂದಿಗೆ ವ್ಯವಹರಿಸುವ ನೋಂದಾಯಿತ ಜಿ.ಎಸ್.ಟಿ ಗ್ರಾಹಕರಿಂದ ಅವರುಗಳ ಜಿ.ಎಸ್.ಟಿ.ವಿವರ ಗಳನ್ನು ಪಡೆದು ಪ್ರತ್ಯೇಕ ರಿಜಿಸ್ಟರ್‌ನಲ್ಲಿ ವಿವರಗಳನ್ನು ನಮೂದಿಸತಕ್ಕದ್ದು.

5) ಲೆಕ್ಕ ಘಟಕಗಳಲ್ಲಿ ಹುಂಡಿಗಳನ್ನು ಪಾಸು ಮಾಡುವಾಗ ಜಿ.ಎಸ್.ಟಿಯ ನಿಯಮಾವಳಿಗಳ ಪ್ರಕಾರ ನಿಗಮಕ್ಕೆ ಸರಕು ಅಥವಾ ಸೇವೆ ಪೂರೈಕೆದಾರರು ಸಲ್ಲಿಸುವ ಹುಂಡಿಗಳಲ್ಲಿ ಮೊತ್ತಗಳನ್ನು, ನೇರವಾಗಿ ಹೆಚ್ಚು ಅಥವಾ ಕಡಿಮೆ ಮಾಡಲು ಅವಕಾಶವಿರುವುದಿಲ್ಲ. ಒಂದು ಪಕ್ಷ ಸರಕು ಅಥವಾ ಸೇವೆ ಪೂರೈಕೆದಾರರು ಸಲ್ಲಿಸಿದ ಹುಂಡಿಗಳ ಮೊತ್ತವನ್ನು ಹೆಚ್ಚು ಅಥವಾ ಕಡಿಮೆ ಮಾಡಬೇಕಾದಲ್ಲಿ ಜಮಾ ಚೀಟಿಗಳ ಹಾಗೂ ಖರ್ಚು ಚೀಟಿಯನ್ನು **(Debit Note & Credit Note)**ಲಗತ್ತಿಸುವುದು. ಈ ಜಮಾ ಮತ್ತು ಖರ್ಚು ಚೀಟಿಗಳ ನಮೂನೆಗಳನ್ನು ಉಲ್ಲೇಖ(1)ರಲ್ಲಿ ನೀಡಲಾಗಿದೆ.

6) ರೂ.200/- ರವರೆಗಿನ ಸರಕು ಮತ್ತು ಸೇವೆಗಳ ಪೂರೈಕೆಗೆ ಹಾಗೂ ನಿಗಮದ ಗ್ರಾಹಕರಿಗೆ ವಿವಿಧ ಸರಕು ಮತ್ತು ಸೇವೆಗಳನ್ನು ಪೂರೈಸಿದರೆ, ಒಂದು ನಿರ್ದಿಷ್ಠ ಲೆಕ್ಕ ಶೀರ್ಷಿಕೆಯಲ್ಲಿ ದಿನದ ಅಂತ್ಯಕ್ಕೆ ಸಂಗ್ರಹಿಸಿದ ಒಟ್ಟು ಮೊತ್ತಕ್ಕೆ ಒಂದೇ ಕ್ರೋಢೀಕೃತ**(Consolideted, Tax Invoice)**ಜಿ.ಎಸ್.ಟಿ ದರವಾರು ಮುದ್ರಿಸಿ ದಾಖಲಾತಿಗಾಗಿ ಸಂಗ್ರಹಿಸಿಕೊಳ್ಳುವುದು.

7) ಹುಂಡಿಗಳನ್ನು ಪಾಸು ಮಾಡಿದ ನಂತರ ಪಾವತಿಗಾಗಿ ನಿಧಿ ಕೋರಿಕೆಯನ್ನು ಸಲ್ಲಿಸುವುದು ಹಾಗೂ ನಿಧಿ ಬಿಡುಗಡೆಯಾದ ನಂತರ ಪಾವತಿಸುವುದು ನಿಯಮವಾಗಿರುತ್ತದೆ, ಆದರೆ ಜಿ.ಎಸ್.ಟಿ ಮಾಹಿತಿಗಳನ್ನು ನಿಗಮ ಕಛೇರಿಗೆ ನಿಗಧಿತ ನಮೂನೆಗಳಲ್ಲಿ ಸಲ್ಲಿಸುವಾಗ ಯಾವ ಮಾಹೆಗಳಲ್ಲಿ ಹುಂಡಿಗಳನ್ನು ಪಾಸು ಮಾಡಲಾಗಿದೆಯೇ, ಅದೇ ಮಾಹೆಯಲ್ಲಿ ಸದರಿ ಹುಂಡಿಗಳ ಮೊತ್ತವು ಪಾವತಿಯಾಗಿದ್ದಲ್ಲಿ ಅಥವಾ ಇಲ್ಲದಿದ್ದಲ್ಲಿ, ನಿಗದಿತ ನಮೂನೆಗಳಲ್ಲಿ ಮಾಹಿತಿಯನ್ನು ನೀಡತಕ್ಕದ್ದು.

8) ಜಿ.ಎಸ್.ಟಿ ನೋಂದಣಿ ಹೊಂದಿದ/ಹೊಂದದಿರುವ ಯಾವುದೇ ಗ್ರಾಹಕರು ಪ್ರತ್ಯೇಕ ಸರಕು ಪಟ್ಟಿ(Tax Invoice)ನೀಡಲು ಪ್ರತ್ಯೇಕವಾಗಿ ಕೋರಿದರೆ, ಅದನ್ನು ಪ್ರತ್ಯೇಕವಾಗಿ ನೀಡತಕ್ಕದ್ದು.

**ಪು.ತಿ.ನೋ.**

9) ಜಿ.ಎಸ್.ಟಿ ಸೇವಾ ಪೂರೈಕೆದಾರರಿಂದ ಹುಟ್ಟುವಳಿ ತೆರಿಗೆ ಜಮೆ(**Input Tax Credit**)ತೆಗೆದು ಕೊಳ್ಳದಿರುವ ಬಗ್ಗೆ ಘೋಷಣೆ/ದೃಢೀಕರಣ ಪಡೆಯತಕ್ಕದ್ದು, ಉದಾ:ಸರಕು ಸಾಗಾಣಿಕೆ ಸೇವೆಗಳಿಗೆ ಸಂಬಂಧಿಸಿದಂತೆ ಹಾಲಿ **ಶೇಕಡ 5%** ಜಿ.ಎಸ್.ಟಿಯನ್ನು ಪಾವತಿಸಬೇಕಾಗುತ್ತದೆ. ಸದರಿ ಸೇವೆ ಪೂರೈಕೆದಾರ ರಿಂದ ಹುಟ್ಟುವಳಿ ತೆರಿಗೆ ಜಮೆ(**Input Tax Credit**)ತೆಗೆದುಕೊಳ್ಳದಿರುವ ಬಗ್ಗೆ ಘೋಷಣೆ/ದೃಢೀಕರಣವನ್ನು ಪಡೆಯದಿದ್ದಲ್ಲಿ ನಿಗಮವು ರಿವರ್ಸ್ ಚಾರ್ಜ್ ಮೆಕಾನಿಸಂನಲ್ಲಿ ಪಾವತಿಸಿರುವ **5%**ರ ಬದಲಾಗಿ **18%** ಪಾವತಿಸಬೇಕಾಗಿರುತ್ತದೆ ಮತ್ತು ಇದಕ್ಕೆ ಹೆಚ್ಚುವರಿಯಾಗಿ ದಂಡ ಹಾಗೂ ಬಡ್ಡಿಯನ್ನು ಸಹ ತೆರಬೇಕಾಗುತ್ತದೆ.

10) ಕರ್ನಾಟಕ ರಾಜ್ಯದ ಒಳಗೆ ಖರೀದಿ ಅಥವಾ ಸೇವೆಯನ್ನು ಪಡೆದಿದ್ದರೆ, ಹುಂಡಿಯನ್ನು ಪಾಸು ಮಾಡುವಾಗ ಜಿ.ಎಸ್.ಟಿ ತೆರಿಗೆ ಮೊತ್ತವನ್ನು ಎರಡು ವಿಭಾಗಗಲ್ಲಿ ಅಂದರೆ ಕೇಂದ್ರ ಸರಕು ಮತ್ತು ಸೇವೆಗೆ (ಸಿ.ಜಿ.ಎಸ್.ಟಿ)ಹಾಗೂ ರಾಜ್ಯ ಸರಕು ಮತ್ತು ಸೇವೆಗೆ (ಎಸ್.ಜಿ.ಎಸ್.ಟಿ) ತೆರಿಗೆಗಳ ವಿವರಗಳನ್ನು ಪ್ರತ್ಯೇಕವಾಗಿ ಸಂಬಂಧಿಸಿದ ದಾಖಲೆಗಳಲ್ಲಿ ನಮೂದಿಸಿ ನಿರ್ವಹಿಸುವುದು.

11) ನಿಗಮವು ಖರೀದಿಸುವ ಅಥವಾ ಪಡೆಯುವ ಸರಕು ಹಾಗೂ ಸೇವೆಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ನಿಗಧಿತ ನಮೂನೆಯಲ್ಲಿ ನಿಗಮ ಕಛೇರಿಗೆ ಸಲ್ಲಿಸುವಾಗ ಸದರಿ ಮಾಹಿತಿಗಳು ರೆಕರಿಂಗ್ ರಿಜಿಸ್ಟರ್, ಜನರಲ್ ಲೆಡ್ಜರ್, ತಾಳೆಪಟ್ಟಿ ಇತ್ಯಾದಿಗಳಿಗೆ ತಾಳೆ ಮಾಡಿ ವಿವರಗಳು ಸರಿ ಇರುವ ಬಗ್ಗೆ ಪರಿಶೀಲಿಸಿ ಸಲ್ಲಿಸತಕ್ಕದ್ದು.

12) ನಿಗಮದಿಂದ ಗ್ರಾಹಕರಿಗೆ ನೀಡಲಾಗುವ ಕೆಲವು ಸೇವೆಗಳು ಮತ್ತು ಅದಕ್ಕೆ ಅನ್ವಯಿಸುವ ಜಿ.ಎಸ್.ಟಿ. ದರಗಳ ಪಟ್ಟಿಯನ್ನು ಈಗಾಗಲೆ ಉಲ್ಲೇಖ (1) ರ ಪತ್ರದ ಪ್ಯಾರ (ಕ್ಯೂ)ನಲ್ಲಿ ಪಟ್ಟಿ ಮಾಡಿದ್ದು, ಅದಕ್ಕೆ ಪೂರಕವಾದ ಹೆಚ್ಚುವರಿ ಪಟ್ಟಿಯನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ.

13) ಜಿ.ಎಸ್.ಟಿ ಮೊತ್ತವನ್ನು, ಸೇವೆಯನ್ನು ನೀಡುವ ಸಂದರ್ಭದಲ್ಲಿ ಸಂಗ್ರಹಿಸಿ, ನಿಗಮ ಕಛೇರಿಯಿಂದ ನೀಡುವ ನಿಗಧಿತ ನಮೂನೆಗಳಲ್ಲಿ ಸಕಾಲದಲ್ಲಿ ಮಾಹಿತಿಯನ್ನು ನೀಡುವುದು. ಸದರಿ ಮೊತ್ತವನ್ನು ನಿಗಮ ಕಛೇರಿಯಿಂದ ಕೇಂದ್ರೀಕೃತವಾಗಿ ಸಂಬಂಧಿಸಿದ ಪ್ರಾಧಿಕಾರಕ್ಕೆ ಪಾವತಿಸಿ ರಿಟರ್ನ್ ಫೈಲ್ ಮಾಡಿದ ನಂತರ ವರ್ಗಾವಣೆ ಆದೇಶದ ಮೂಲಕ ಸಂಬಂಧಿಸಿದ ಲೆಕ್ಕ ಘಟಕಗಳಿಗೆ ಲೆಕ್ಕೀಕರಿಸಲು ನಿಗಮ ಕಛೇರಿಯಿಂದ ವರ್ಗಾಯಿಸಲಾಗುವುದು.

14) ಈಗಾಗಲೆ ನೋಂದಣಿಯಾಗಿರುವ ನಿಗಮದ ಗ್ರಾಹಕರುಗಳಿಂದ ಜಿ.ಎಸ್.ಟಿ ವಿವರಗಳನ್ನು ಪಡೆಯತಕ್ಕದ್ದು ಅದರಲ್ಲೂ ವಿಶೇಶವಾಗಿ ಎಲ್.ಟಿ-3, ಎಲ್.ಟಿ-5, ಎಲ್.ಟಿ-7 ಹಾಗೂ ಎಲ್ಲಾ ಹೆಚ್.ಟಿ ಗ್ರಾಹಕರುಗಳಿಂದ ಜಿ.ಎಸ್.ಟಿ ಸಂಖ್ಯೆಯನ್ನು ಪಡೆದು ಸಂಬಂಧಿಸಿದ ಗ್ರಾಹಕರ ಕಂಪ್ಯೂಟರ್ ಲೆಡ್ಜರ್ ಗಳಲ್ಲಿ ನಮೂದಿಸಿ ನಿರ್ವಹಿಸತಕ್ಕದ್ದು.

15) ಆಂತರಿಕ ತಪಾಸಣ ಅಧಿಕಾರಿ/ಸಿಬ್ಬಂದಿಗಳು ನಡೆಸುವ ತಪಾಸಣ ವೇಳೆಯಲ್ಲಿ ಜಿ.ಎಸ್.ಟಿಗೆ ಸಂಬಂಧಿಸಿದ ವಿವರಗಳನ್ನು ಒದಗಿಸಿ ಅವು ಸರಿ ಇರುವ ಬಗ್ಗೆ ಸೂಕ್ತ ದೃಢೀಕರಣವನ್ನು ಆಂತರಿಕ ಪರಿಶೋದಕರಿಂದ ಪಡೆಯತ್ತಕ್ಕದ್ದು.

## ತಾಂತ್ರಿಕ ಶಾಖೆಗಳಲ್ಲಿ/ಲೆಕ್ಕಘಟಕಗಳಲ್ಲಿ ಅನುಸರಿಸಬೇಕಾದ ನಿಯಮಗಳು:-

1) ನಿಗಮಕ್ಕೆ ಹೊಸ ಗ್ರಾಹಕರುಗಳು ಅರ್ಜಿಗಳನ್ನು ನೋಂದಣಿಮಾಡಿಸುವ ಸಂದರ್ಭದಲ್ಲಿ ಜಿ.ಎಸ್.ಟಿ ನೋಂದಣಿಯಾದ ವಿವರಗಳನ್ನು ಪಡೆಯತಕ್ಕದ್ದು ಅದರಲ್ಲೂ ವಿಶೇಶವಾಗಿ ವಾಣಿಜ್ಯ, ಇಂಡಸ್ಟ್ರೀಸ್ ಸಂಸ್ಥೆ ಹಾಗೂ ಎಲ್ಲಾ ಹೆಚ್.ಟಿ ಗ್ರಾಹಕರುಗಳಿಂದ ಜಿ.ಎಸ್.ಟಿ ಸಂಖ್ಯೆಯನ್ನು ಪಡೆದು ಸಂಬಂಧಿಸಿದ ಗ್ರಾಹಕರ ಕಂಪ್ಯೂಟರ್ ಲೆಡ್ಜರ್ ಗಳಲ್ಲಿ ನಮೂದಿಸಿ ನಿರ್ವಹಿಸತಕ್ಕದ್ದು.

**ಪು.ತಿ.ನೋ.**

2) ತಾಂತ್ರಿಕ ಶಾಖೆಗಳಲ್ಲಿ/ಸಂಬಂಧಿಸದ ಘಟಕಗಳಲ್ಲಿ ವಿವಿದ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಮೇಲ್ವಿಚಾರಣೆ ಶುಲ್ಕ ಹಾಗೂ ಇತರ ಸೇವೆಗಳ ಮೇಲೆ ಜಿ.ಎಸ್.ಟಿ ತೆರಿಗೆಯನ್ನು ಸಂಗ್ರಹಿಸುವ ಸಂಬಂಧ ಇಂಟಿಮೇಷನ್ ನೀಡುವ/ಅದೇಶ ಮಾಡುವ ಸಂದರ್ಭದಲ್ಲಿ, ಯಾವ ಕಛೇರಿಯಲ್ಲಿ ಸೇವೆಗಳಿಗೆ ಸಂಬಂಧಿಸಿದ ಹಣವನ್ನು ಪಾವತಿಸಿಕೊಳ್ಳಲು ಆದೇಶ/ತಿಳುವಳಿಕ್ಕೆ ಪತ್ರ ನೀಡುತ್ತಾರೋ ಅದೇ ಕಛೇರಿಯಲ್ಲಿ ಟ್ಯಾಕ್ಸ್ ಇನ್ವಾಯ್ಸ್ ಸಿದ್ದಪಡಿಸಿ ನೀಡುವುದು, ಅದರ ಪ್ರತಿಗಳನ್ನು ಇಂಟಿಮೇಷನ್ ಜೋತೆ ಕಡ್ಡಾಯವಾಗಿ ಗ್ರಾಹಕರಿಗೆ ನೀಡತಕ್ಕದ್ದು. ತೆರಿಗೆ ಪಟ್ಟಿ(ಟ್ಯಾಕ್ಸ್ ಇನ್ವಾಯ್ಸ್)ನಮೂನೆಗಳನ್ನು ಉಲ್ಲೇಖ(1)ರ ಪತ್ರದಲ್ಲಿ ನೀಡಲಾಗಿದೆ. ಪ್ರತಿಯೊಂದು ಲೆಕ್ಕ ಘಟಕಗಳು ರಶೀದಿ ಹಾಕುವಾಗ ಕಡ್ಡಾಯವಾಗಿ ಇಂಟಿಮೇಷನ್ ಜೊತೆ ತೆರಿಗೆ ಪಟ್ಟಿಯನ್ನು ಪಡೆದುಕೊಳ್ಳುವುದು.

3) ನಿಗಮದ ವಿವಿದ ಕಾಮಗಾರಿಗಳಿಗೆ ತಯಾರು ಮಾಡುವ ಅಂದಾಜು ಪಟ್ಟಿಗೆ ನಿಗಮದ ಎಸ್.ಆರ್. ದರಗಳು ಆಧಾರವಾಗಿದ್ದು, ಈ ಕೆಳಕಂಡಂತೆ ಕ್ರಮ ಜರುಗಿಸುವುದು:-

(ಅ) ವಿವಿದ ಸಾಮಾಗ್ರಿಗಳಿಗೆ ಸಂಬಂಧಿಸಿದ ದರಗಳು ಮಾತ್ರ(Materials Rates)ಎಲ್ಲಾ ರೀತಿಯ ತೆರಿಗೆಗಳನ್ನು ಒಳಗೊಂಡಿರುತ್ತವೆ. ಈ ಸಂಬಂಧ ಜಿ.ಎಸ್.ಟಿ Determination of value supply ನ ನಿಯಮ (೯)ರ ಪ್ರಕಾರ ಅಂದಾಜು ಪಟ್ಟಿ ತಯಾರಿಸುವಾಗ ಕ್ರಮ ಜರುಗಿಸುವುದು.

(ಆ) ಮಜೂರಿ ಕೂಲಿಗಳಿಗೆ ಹಾಗೂ ಇತರೆ ಸಂಬಂಧಿಸಿದ ದರಗಳು (Labour Rates)ಎಲ್ಲಾ ರೀತಿಯ ತೆರಿಗೆಗಳನ್ನು ಹೊರತು ಪಡಿಸಿರುತ್ತದೆ. ಈ ಸಂಬಂಧ ಅಂದಾಜು ಪಟ್ಟಿ ತಯಾರಿಸುವಾಗ ಅನ್ವಯವಾಗುವ ಜಿ.ಎಸ್.ಟಿ ದರಗಳನ್ನು ಸೇರಿಸಿ ಅಂದಾಜು ಪಟ್ಟಿ ತಯಾರಿಸುವುದು.

**ಇತರೆ ವಿಷಯಗಳು:-**

1) ಜಿ.ಎಸ್.ಟಿಗೆ ಸಂಬಂಧಿಸಿದಂತೆ, ಇಂಗ್ಲೀಷ್ ಮತ್ತು ಕನ್ನಡದ ಕೆಲವು ಪ್ರಮುಕ ಪದಕೋಶಗಳನ್ನು ಅನುಬಂಧ-3ರಲ್ಲಿ ನೀಡಲಾಗಿದ್ದು, ಅವುಗಳನ್ನು ಅಭ್ಯಾಸಿಸಿ ದಿನ ನಿತ್ಯದ ಕೆಲಸಗಳಲ್ಲಿ ಅನುಷ್ಠಾನಗೊಳಿಸತಕ್ಕದ್ದು.

2) ಆ ತಿಂಗಳಲ್ಲಿ ತಾಂತ್ರಿಕ ಶಾಖಾ ವತಿಯಿಂದ ಮತ್ತು ಕಂದಾಯ ಶಾಖೆಗಳಿಂದ ಪಾವತಿ ಮಾಡಬೇಕಾದ/ ಸಂಗ್ರಹವಾಗುವ ಸರಕು ಮತ್ತು ಸೇವಾ ತೆರಿಗೆಗಳ ವಿವರಗಳನ್ನು, ನಿಗಮ ಕಛೇರಿಯಿಂದ ಗೂಗಲ್ ಡ್ರೈವ್‌ನಲ್ಲಿ ಜಿ.ಎಸ್.ಟಿಗೆಂದು ಮೀಸಲಾದ ಜಿ-ಮೇಲ್ ಐಡಿಗಳಿಗೆ ಒದಗಿಸುವ ನಿಗದಿತ ನಮೂನೆಗಳಲ್ಲಿ ಮುಂದಿನ ತಿಂಗಳ 5ನೇ ತಾರೀಖಿನ ಒಳಗೆ ಮಾಹಿತಿಯನ್ನು ಸಲ್ಲಿಸುವುದು.

2) ಜಿ.ಎಸ್.ಟಿಯು ಶಾಸನಬದ್ಧ ಪಾವತಿಯಾದ್ದರಿಂದ, ನಿಗಮವು ಹೊರಡಿಸಿರುವ ಆದೇಶಗಳು/ಪತ್ರಗಳು **http://www.cescmysore.org** ವೆಬ್‌ಸೈಟ್‌ನಲ್ಲಿ ಲಭ್ಯವಿದ್ದು ಹಾಗೂ ಜಿ.ಎಸ್.ಟಿಯ ವೆಬ್‌ಸೈಟ್ www.gst.gov.inಗಳಲ್ಲಿ ಪ್ರಕಟಿಸಿರುವ ಪಠ್ಯ ಕ್ರಮಗಳನ್ನು ಅಭ್ಯಾಸಿಸಿ ಅದರನ್ವಯ ದಿನಾಂಕ:01.07.2017ರಿಂದಲೇ ಅನ್ವಯಿಸುವಂತೆ ಅನುಷ್ಠಾನಗೊಳಿಸತಕ್ಕದ್ದು. ತಪ್ಪಿದಲ್ಲಿ ಮುಂದೆ ಉದ್ಭವಿಸಬಹುದಾದ ಯಾವುದೇ ದಂಡ, ಬಡ್ಡಿ, ತೆರಿಗೆ ಇತ್ಯಾದಿಗಳಿಗೆ ಸಂಬಂಧಿಸಿದ ಅಧಿಕಾರಿ/ ಸಿಬ್ಬಂದಿಗಳೆ ಹೊಣೆಗಾರರಾಗಿರುತ್ತಾರೆಂದು ಈ ಮೂಲಕ ಮತ್ತೊಮ್ಮೆ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

ಮುಖ್ಯ ~~ಆಡಳಿತ~~ ಅಧಿಕಾರಿ.

ಪ್ರತಿಗಳು:-

- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ. ಪ) ಚಾವಿಸನಿನಿ,ನಿಗಮ ಕಛೇರಿ ಮೈಸೂರು, ರವರ ಮಾಹಿತಿಗಾಗಿ.
- ಮುಖ್ಯ ಇಂಜಿನಿಯರ್ (ವಿ) ವಲಯ ಕಛೇರಿ ಚಾವಿಸನಿನಿ, ಮೈಸೂರು,
- ಪ್ರಧಾನ ವ್ಯವಸ್ಥಾಪಕರು-ವಾಣಿಜ್ಯ/ತಾಂತ್ರಿಕ/ಯೋಜನೆ/ಖರೀದಿ/ಲೆ ಮತ್ತು ಸ/ ಕಛೇರಿ ಚಾವಿಸನಿನಿ, ನಿಗಮ ಕಛೇರಿ ಮೈಸೂರು

ಪು.ತಿ.ನೋ.

- ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಕಛೇರಿಗಳು ಚಾವಿಸನಿನಿ,
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾ ಮತ್ತು ಪಾ ವಿಭಾಗಗಳು, ಚಾವಿಸನಿನಿ,
- ಸಹಾಯಕ ಪ್ರಧಾನ ವ್ಯವಸ್ಥಾಪಕರು(ಆಂ ನಿ) ನಿಗಮ ಕಛೇರಿ ಚಾವಿಸನಿನಿ, ನಿಗಮ ಕಛೇರಿ ಮೈಸೂರು
- ಎಲ್ಲಾ ಲೆಕ್ಕಾಧಿಕಾರಿಗಳು /ಆಂ ಪ/ವೃತ್ತಕಛೇರಿ/ ಚಾವಿಸನಿನಿ,
- ಉಪಪ್ರಧಾನ ವ್ಯವಸ್ಥಾಪಕರು(ಎಮ್.ಐ, ಎಸ್) ನಿಗಮದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
- ಆಪ್ತ ಕಾರ್ಯದರ್ಶಿ, ವ್ಯ.ನಿ/ನಿ(ತಾಂ)/ಮುಆಅ.
- ಸಹಾಯಕ ಪ್ರಧಾನ ವ್ಯವಸ್ಥಾಪಕರು(ತೆರಿಗೆ)/ಮು.ಕ.

Annexure I: State code and TIN number co-relation for implementing the validation

ANNEXTURE-01

| Sr. No. | State Name | TIN number – First two digits | State Code |
|---|---|---|---|
| 1 | Andaman and Nicobar Islands | 35 | AN |
| 2 | Andhra Pradesh | 28 | AP |
| 3 | Andhra Pradesh (New) | 37 | AD |
| 4 | Arunachal Pradesh | 12 | AR |
| 5 | Assam | 18 | AS |
| 6 | Bihar | 10 | BH |
| 7 | Chandigarh | 04 | CH |
| 8 | Chattisgarh | 22 | CT |
| 9 | Dadra and Nagar Haveli | 26 | DN |
| 10 | Daman and Diu | 25 | DD |
| 11 | Delhi | 07 | DL |
| 12 | Goa | 30 | GA |
| 13 | Gujarat | 24 | GJ |
| 14 | Haryana | 06 | HR |
| 15 | Himachal Pradesh | 02 | HP |
| 16 | Jammu and Kashmir | 01 | JK |
| 17 | Jharkhand | 20 | JH |
| 18 | Karnataka | 29 | KA |
| 19 | Kerala | 32 | KL |
| 20 | Lakshadweep Islands | 31 | LD |
| 21 | Madhya Pradesh | 23 | MP |
| 22 | Maharashtra | 27 | MH |
| 23 | Manipur | 14 | MN |
| 24 | Meghalaya | 17 | ME |
| 25 | Mizoram | 15 | MI |
| 26 | Nagaland | 13 | NL |
| 27 | Odisha | 21 | OR |
| 28 | Pondicherry | 34 | PY |
| 29 | Punjab | 03 | PB |
| 30 | Rajasthan | 08 | RJ |
| 31 | Sikkim | 11 | SK |
| 32 | Tamil Nadu | 33 | TN |
| 33 | Telangana | 36 | TS |
| 34 | Tripura | 16 | TR |
| 35 | Uttar Pradesh | 09 | UP |
| 36 | Uttarakhand | 05 | UT |
| 37 | West Bengal | 19 | WB |

ANNEXTURE-02

## LIST OF OUTWARD SUPPLAY OF SERVICES
**(SUPORTING SERVCES PROVIDING BY CESC TO OUTSIDERS DURING THE COURSE OF DISTRIBUTION OF ELELCRCITY)**

| SL. No. | Nature of outward Supply of Services | HSN/SAC Code No. | Applicbility of GST | Remarks |
|---|---|---|---|---|
| 1 | Development Charges | 998631 | 18% | Support services to electricity transmission and distribution |
| 2 | Penalty recovered from supplier Bills | 998631 | 18% | Support services to electricity transmission and distribution |
| 3 | Rebates collected for In time payment of energy purchase bills dues | 998631 | 18% | Support services to electricity transmission and distribution |
| 4 | Any amount transferred to Misc. Revenue after 3 Years | 998631 | 18% | Support services to electricity transmission and distribution |
| 5 | Steal Cheques | 998631 | 18% | Support services to electricity transmission and distribution |
| 6 | Goods sold under Barter System | Depending upon the product | 18% to 28% | Sale of goods depending upon the products sold |
| 7 | Disconnection& Reconnection Fees | 998631 | 18% | Support services to electricity transmission and distribution |
| 8 | SR Books sold to Employees | 49011010 | 0% | Printed Books |
| 9 | Departmental Exam fees collected form employees of CESC/KPTCL | 998631 | 18% | Support services to electricity transmission and distribution |
| 10 | Replacement of Assets during the Guarantee Period (Using Delivery Challan) | Depending upon the product | 0% / 18% | (i) If the Assets are given free of cost then GST – 0%<br>(i) If the Assets are invoiced, then depending upon the products GST is applicable |
| 11 | Part-time Sweepers wages | NA | 0% | Wages are excluded from GST |

**Note:** The above items are only Illustrative and not Exhaustive. If any changes in the GST law for the above items, the revised law shall be applicable.

# Annexure-03

| | | |
|---|---|---|
| 1 | Actionable Claim | ಕ್ರಮಾರ್ಹ ಕ್ಲೇಮು |
| 2 | Adjudicating Authority | ನ್ಯಾಯನಿರ್ಣಯ ಪ್ರಾಧಿಕಾರ |
| 3 | Advance Ruling | ಪೂರ್ಣಭಾವಿ ನಿರ್ಣಯ |
| 4 | Aggrigate Turnover | ಸಮಗ್ರ ವಹಿವಾಟು |
| 5 | Anti-Profiteering Measure | ಲಾಭಬಡಕತನ ನಿರೋಧಕ ಕ್ರಮ |
| 6 | Appellate Authority | ಅಪೀಲು ಪ್ರಾದಿಕಾರ |
| 7 | Appellate Tribunal | ಅಪೀಲು ನ್ಯಾಯಾದೀಕರಣ |
| 8 | Apportionment of Credit | ಜಮೆಯ ಹಂಚಿಕೆ |
| 9 | Assessment | ಕರನಿರ್ಧರಣೆ |
| 10 | Associated Enterprises | ಸಹವರ್ತಿ ಉದ್ಯಮ |
| 11 | Audit | ಲೆಕ್ಕ ಪರಿಶೋಧನೆ |
| 12 | Authorized Representative | ಪ್ರಾಧಿಕೃತ ಪ್ರತಿನಿಧಿ |
| 13 | Authorsed Branch | ಪ್ರಾಧಿಕೃತ ಬ್ಯಾಂಕ್ |
| 14 | Barter | ವಸ್ತುವಿನಿಮಯ |
| 15 | Blocked Credits | ತಡೆಹಿಡಿದ ಜಮೆಗಳು |
| 16 | Business | ವ್ಯವಹಾರ |
| 17 | Business Verticals | ವ್ಯವಹಾರ ಶ್ರೇಣಿ |
| 18 | Casual Taxable person | ಸಾಂದರ್ಭಿಕ ತೆರಿಗೆದಾಯಕ ವ್ಯಕ್ತಿ |
| 19 | Cess | ಉಪಕರ |
| 20 | Collection | ಸಂಗ್ರಹಿಸುವಿಕೆ/ವಸೂಲಾತಿ |
| 21 | Compliance Rating | ಪರಿಪಾಲನಾ ಶ್ರೇಣಿ |
| 22 | Composite | ಸಂಯುಕ್ತ |
| 23 | Composite Supply | ಸಂಯುಕ್ತ ಪೂರೈಕೆ |
| 24 | Composition Levy | ರಾಜಿ ತೆರಿಗೆ ವಿಧಿಸುವಿಕೆ |
| 25 | Compounding of offences | ಅಪರಾಧಿಗಳ ರಾಜಿ |
| 26 | Consideration | ಪ್ರತಿಫಲ |
| 27 | Conveyance | ಸಾಗಣಿಕೆ ವಾಹನ |
| 28 | Council | ಪರಿಷತ್ |
| 29 | Credit Notes | ಜಮೆ ಚೀಟಿಗಳು |
| 30 | Debit Notes | ಖರ್ಚುಚೀಟಿಗಳು |
| 31 | Deemed | ಪರಿಭಾವಿತ |
| 32 | Deemed Export | ಪರಿಭಾವಿತ ರಫ್ತುಗಳ |
| 33 | Deemed Registration | ಪರಿಭಾವಿತ ನೋಂದಣಿ |
| 34 | Demand and Recovery | ತಗಾದೆಗಳು/ಬೇಡಿಕೆ ಮತ್ತು ವಸೂಲಿ |
| 35 | Designated Authority | ನೇಮಿತ ಪ್ರಾಧಿಕಾರ |
| 36 | Document | ದಸ್ತಾವೇಜು |
| 37 | Drawback | ಸುಂಕ ವಾಪಸಾತಿ |
| 38 | Electronic Cash Ledger | ವಿದ್ಯುನ್ಮಾನ ನಗದು ಖಾತೆ |
| 39 | Electronic Commerce | ವಿದ್ಯುನ್ಮಾನ ವಾಣಿಜ್ಯ |
| 40 | Electronic Commerce Operator | ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕ |
| 41 | Electronic Credit Ledger | ವಿದ್ಯುನ್ಮಾನ ಜಮಾ ಖಾತೆ |
| 42 | Exempt Supply | ವಿನಾಯಿತಿ ಪೂರೈಕೆ |
| 43 | Existing Law | ಅಸ್ತಿತ್ವದಲ್ಲಿರುವ ಕಾನೂನು |
| 44 | Forward Charge | ಮುಮ್ಮುಕ ವಿಧಿಸುವಿಕೆ |
| 45 | ILLustration | ದೃಷ್ಟಾಂತ |

| | | |
|---|---|---|
| 46 | Input | ಹೂಡುವಳಿ |
| 47 | Input service | ಹೂಡುವಳಿ ಸೇವೆಗಳು |
| 48 | Input service distributors | ಹೂಡುವಳಿ ಸೇವೆಯ ಹಂಚಿಕೆದಾರ |
| 49 | Input Tax | ಹೂಡುವಳಿ ತೆರಿಗೆ |
| 50 | Input Tax Credit | ಹುಡುವಳಿ ತೆರಿಗೆ ಜಮೆ |
| 51 | Integrated Tax | ಏಕೀಕೃತ ತೆರಿಗೆ |
| 52 | Inter-state supply of Goods | ಅಂತರಾಜ್ಯ ಸರಕುಗಳ ಪೊರ್ರೈಕೆ |
| 53 | Inter-state supply of Service | ಅಂತರಾಜ್ಯ ಸೇವೆಗಳ ಪೊರ್ರೈಕೆ |
| 54 | Intra-state supply of Goods | ರಾಜ್ಯದೊಳಗಿನ ಸರಕುಗಳ ಪೂರೈಕೆ |
| 55 | Intra-state supply of Service | ರಾಜ್ಯದೊಳಗಿನ ಸೇವೆಗಳ ಪೂರೈಕೆ |
| 56 | Invoice | ಬೆಲೆಪಟ್ಟಿ |
| 57 | Inward Supply | ಒಳಮುಖಿ ಪೂರೈಕೆ |
| 58 | Job work | ಮಜೂರಿ ಕೆಲಸ |
| 59 | Job works | ಮಜೂರಿ ಕೆಲಸಗಳು |
| 60 | Levy | ವಿಧಿಸುವಿಕೆ |
| 61 | Liable | ಬಾಧ್ಯತೆ |
| 62 | Miscellaneous Provisions | ಸಂಕೀರ್ಣ ಉಪಬಂಧಿಗಳು |
| 63 | Mixed Supplys | ಮಿಶ್ರ ಪೂರೈಕೆಗಳು |
| 64 | Mixed Supply | ಮಿಶ್ರ ಪೂರೈಕೆ |
| 65 | Nonresidential taxable person | ಅನಿವಾಸಿ ತೆರಿಗೆದಾಯಕ ವ್ಯಕ್ತಿ |
| 66 | Non-Taxable supply | ತೆರಿಗೆ ರಹಿತ ಪೂರೈಕೆ |
| 67 | Non-Taxable Territory | ತೆರಿಗೆ ರಹಿತ ಕ್ಷೇತ್ರ |
| 68 | Notification | ಅಧಿಸೂಚನೆ |
| 69 | Other territory | ಅನ್ಯಕ್ಷೇತ್ರ |
| 70 | Output Tax | ಹುಟ್ಟುವಳಿ ತೆರಿಗೆ |
| 71 | Outward Supply | ಹೊರಮುಖಿ ಪೂರೈಕೆ |
| 72 | Principal | ಪ್ರಧಾನ ಕರ್ತ |
| 73 | Proper officer | ಯುಕ್ತ ಅಧಿಕಾರಿ |
| 74 | Provided | ಪರಂತು |
| 75 | Provisional Assessments | ತಾತ್ಕಾಲಿಕ ಕರನಿರ್ಧರಣೆ |
| 76 | Receipient | ಸ್ವೀಕರಿಸುವವನು |
| 77 | Regulations | ವಿನಿಯಮಗಳು |
| 78 | Related persons | ಸಂಬಂಧಿತ ವ್ಯಕ್ತಿಗಳ |
| 79 | Relevancy | ಸುಸಂಬದ್ಧತೆ |
| 80 | Relevant Date | ಸಂಬಂಧಿಸಿದ ದಿನಾಂಕ |
| 81 | Relevant period | ಸಂಬಂಧಿಸಿದ ಅವದಿ |
| 82 | Removal | ತೆಗೆಯುವುದು |
| 83 | Reverse Charge | ಹಿಮ್ಮುಕ ವಿಧಿಸುವಿಕೆ |
| 84 | Revision | ಪುನರೀಕ್ಷಣೆ |
| 85 | Rounding of Tax | ತೆರಿಗೆಯನ್ನು ಪೂರ್ಣಾಂಕಗೊಳಿಸುವುದು |
| 86 | Schedule | ಅನುಸೂಚಿ |
| 87 | Scop of Supply | ಪೂರೈಕೆಯ ವ್ಯಾಪ್ತಿ |
| 88 | Scrap | ರದ್ದಿ |
| 89 | Securities | ಭದ್ರತಾ ಪತ್ರಗಳು |
| 90 | Self-Assessments | ಸ್ವಯಂ ಕರನಿರ್ಧರಣೆ |
| 91 | Supplementary Invoice | ಪೂರಕ ಬೆಲೆಪಟ್ಟಿ |
| 92 | Tax Assessment | ಕರನಿರ್ಧರಣ |

| | | |
|---|---|---|
| 93 | Tax collection at source | ಮೂಲದಲ್ಲಿ ತೆರಿಗೆಯನ್ನು ಸಂಗ್ರಹಿಸುವುದು |
| 94 | Tax Invoice | ತೆರಿಗೆ ಬೆಲೆಪಟ್ಟಿ |
| 95 | Tax Practitioner | ತೆರಿಗೆ ವೃತ್ತಿದಾರರು |
| 96 | Transitional Provisions | ಸ್ಥಿತಂತ್ರರಕಾಲಿನ ಉಪಬಂಧಗಳು |
| 97 | Usual place of residence | ವಾಡಿಕೆ ವಾಸಸ್ಥಳ |
| 98 | Vaild retrun | ಸಿಂಧುವಾದ ರಿಟರ್ನ್ |
| 99 | Work contract | ಗುತ್ತಿಗೆ ಕಾಮಗಾರಿ |